ನಗರಸಭೆ ಮತ್ತು ಪುರಸಭೆಗಳಲ್ಲಿ ಕುಡಿಯುವ ನೀರಿನ ಸರಬರಾಜು

2399(ಎಲ್ಸಿ೧)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರಸಭೆ ಮತ್ತು ಪುರಸಭೆ ಇವುಗಳಲ್ಲಿ ಜನತೆಗೆ ಕುಡಿಯುವ ನೀರಿನ ಸರಬರಾಜನ್ನು ಆರ್ಥಿಕ ಸಮಸ್ಯೆಯಿಂದಾಗಿ ಹಾಗೂ ಸಿಬ್ಬಂದಿಯ ಕೊರತೆಯಿಂದಾಗಿ ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಾ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರವು ಬದಲೀ ವ್ಯವಸ್ಥೆಯನ್ನೇನಾದರೂ ಜಾರಿಗೆ ತರಲು ಉದ್ದೇಶಿಸಿದೆಯೆ?

ಇ) ನಗರಸಭೆ ಮತ್ತು ಪುರಸಭೆಗಳಲ್ಲಿ ಕುಡಿಯುವ ನೀರಿನ ತೆರಿಗೆ ಸಂಗ್ರಹಿಸಲಾಗುತ್ತಿದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು):

ಅ) ಬಂದಿದೆ.

ಆ) ಆರ್ಥಿಕ ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲಿಂದ ಕುಡಿಯುವ ನೀರಿನ ಯೋಜನೆಗಳನ್ನು ಹಂತ ಹಂತವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ತೆಗೆದುಕೊಳ್ಳಲಾಗುವುದು.

ಸಂಬಂಧಿಸಿದ ಜಿಲ್ಲಾಧಿಕಾರಿಗಳ ಮುಖಾಂತರ ಕಂದಾಯ ಇಲಾಖೆಯ ಬರ ಪರಿಹಾರ ನಿಧಿಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಅಥವಾ ಕುಡಿಯುವ ನೀರನ್ನು ಟ್ಯಾಂಕರ್ ಮುಖಾಂತರ ಸರಬರಾಜು ಮಾಡಲಾಗುವುದು.

೧೦ನೇ ಹಣಕಾಸಿನ ಆಯೋಗದ ನಿಧಿಯಿಂದ ಮತ್ತು ರಾಜ್ಯದ ಆರ್ಥಿಕ ನಿಧಿಯಿಂದ ಕುಡಿಯುವ ನೀರಿನ ಯೋಜನೆಯನ್ನು ಅಂದರೆ ಬೋರ್‌ವೆಲ್ ಕೊರೆಸುವುದು, ಪೈಪ್‌ಲೈನ್ ಹಾಕಿಸುವುದು, ಕಿರು ನೀರು ಯೋಜನೆ ಕಾರ್ಯಕ್ರಮಗಳಡಿಯಲ್ಲಿ ಪಟ್ಟಣಗಳಿಗೆ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಸಹ ಮಾಡಲಾಗುವುದು.

ಇ) ಸರ್ಕಾರಿ ಆದೇಶದನ್ವಯ ಎಲ್ಲೆಲ್ಲಿ ನೀರಿನ ಮೀಟರ್‌ಗಳನ್ನು

ಅಳವಡಿಸಲಾಗಿದೆಯೋ ಅಂತಹ ಪ್ರತಿಯೊಂದು ಮೀಟರ್‌ನಿಂದ ಪ್ರತಿ ತಿಂಗಳಿಗೆ ರೂ.೪೫ ನ್ನು ಶೇಖರಿಸಲಾಗುತ್ತಿದೆ. ಆದರೆ ೨೧೦ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಪೈಕಿ ಕೇವಲ ೧೧೩ ನಗರ ಸ್ಥಳೀಯ ಸಂಸ್ಥೆಗಳಿಂದ ವಾಟರ್ ರೇಟ್‌ನ್ನು ಸಂಗ್ರಹಿಸಲಾಗುತ್ತಿದೆ. ನಿರ್ದಿಷ್ಟ ಆಸ್ತಿಯ ವಾರ್ಷಿಕ ಆಸ್ತಿ ತೆರಿಗೆಯ ಶೇ.೬ ರಂತೆ ವಾಟರ್ ಸೆಸ್ ಅನ್ನು ಸಂಗ್ರಹಿಸಲಾಗುತ್ತಿದೆ.

ನಗರ ಪ್ರದೇಶಗಳಲ್ಲಿನ ತ್ಯಾಜ್ಯ ವಸ್ತುಗಳಿಂದ ಹಾಗೂ ವೇಸ್ಟ್‌ನಿಂದಾಗಿ ಜನತೆಯ ಆರೋಗ್ಯದ ಮೇಲೆ ಆಗುವ ಪರಿಣಾಮ.

2400(ಸಿ೦ಕ್ಷಿ)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶದಲ್ಲಿ ಇರುವ ಖಾಸಗಿ ನರ್ಸಿಂಗ್ ಹೋಂಗಳಿಂದ ಶೇಖರವಾಗುವ ತ್ಯಾಜ್ಯ ವಸ್ತುಗಳ ಮತ್ತು ವೇಸ್ಟಿನಿಂದಾಗಿ ನಗರಗಳ ಜನತೆಯ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ನಗರಸಭೆಗಳ ವ್ಯಾಪ್ತಿಯಲ್ಲಿ ಜನತೆಯ ಮೇಲೆ ಆಗುವ ದುಷ್ಪರಿಣಾಮವನ್ನು ತಪ್ಪಿಸಲು ಹಾಗೂ ನಗರದ ಮಾಲಿನ್ಯ ತಡೆಯಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು):

ಅ) ಬಂದಿದೆ.

ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಮಾನಕ್ಕನುಗುಣವಾಗಿ ತ್ಯಾಜ್ಯ ವಸ್ತುಗಳ ಮತ್ತು ವೇಸ್ಟ್ ವಿಲೇವಾರಿ ಮಾಡಲು ಪರಿಸರ ಸಂರಕ್ಷಣಾ ಕಾಯಿದೆ(ಎನ್‌ವಿರಾನ್‌ಮೆಂಟ್ ಪ್ರೊಟೆಕ್ಷನ್ ಆಕ್ಟ್) ೧೯೮೬ ರಡಿಯಲ್ಲಿ ಕೇಂದ್ರ ಸರ್ಕಾರವು ಅನೇಕ ನಿಯಮಗಳನ್ನು ರೂಪಿಸಿದೆ. ಈ ನಿಯಮಗಳ ಪೈಕಿ ಬಯೋ ಮೆಡಿಕಲ್ ವೇಸ್ಟ್ ರೂಲ್ಸ್ ಹಾಗೂ ಮುನಿಸಿಪಲ್ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಮತ್ತು ಹ್ಯಾಂಡ್ಲಿಂಗ್ ನಿಯಮಗಳನ್ನು ರೂಪಿಸಿದ್ದು, ಮುನಿಸಿಪಲ್ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಮತ್ತು ಹ್ಯಾಂಡ್ಲಿಂಗ್ ನಿಯಮಗಳನ್ನು ಕೇಂದ್ರ ಸರ್ಕಾರವು ಜಾರಿ ಮಾಡಿದ ನಂತರ, ಪರಿಸರ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ನಗರ